15 ನೇ ಅಪರ ಲಘು ವ್ಯವಹಾರಗಳ ನ್ಯಾಯಾಲಯ, 23 ನೇ ಎಸಿಎಮ್ಎಮ್
ಮೆಯೋಹಾಲ್ ವಿಭಾಗ, ಬೆಂಗಳೂರು
(ಎಸ್ ಸಿ ಸಿ ಹೆಚ್ -19)
ಸಿಸಿ ಃ 59393 ಃ2018

ಡಿ ಡಬ್ಲ್ಯೂ-1

ದಿನಾಂಕಃ 30.03.2021 ರಂದು ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರುಃ | ಶೈಲಜಾ |
| ಗಂಡನ ಹೆಸರುಃ | ಸತೀಶ್ |
| ವಯಸ್ಸುಃ | 48 ವರ್ಷ |
| ವೃತ್ತಿ | ಗೃಹಿಣಿ |
| ವಾಸಃ | 1 ನೇ ಬ್ಲಾಕ್, ಜಯನಗರ ,<br>ಬೆಂಗಳೂರು. |

ಮುಖ್ಯವಿಚಾರಣೆಃ ಶ್ರೀ. ವಿಟಿ ವಕೀಲರಿಂದ ಆರೋಪಿ ಪರವಾಗಿ.

ನಾವು ಪಿರ್ಯಾದಿದಾರರು ನಡೆಸುತ್ತಿದ್ದ ಎಮ್ ಟಿ ಎಸ್ ಷೋ ರೂಂಗೆ ರಿಚಾರ್ಜ್ ಮಾಡಿಸಲು ಆಗಾಗ ಹೋಗುತ್ತಿದ್ದಾಗ ಅವರು ನಮಗೆ ಪರಿಚಯ ಆಗಿರುತ್ತಾರೆ. ಅವರು ನಮಗೆ ಪರಿಚಯ ಆದ ನಂತರ ತಾವು ಚೀಟಿ ವ್ಯವಹಾರ ನಡೆಸುತ್ತಿದ್ದೇವೆ ಒಳ್ಳೆಯ ಲಾಭ ಇದೆ ನೀವು ಸಹ ಚೀಟಿ ಹಾಕಿ ಎಂದು ನಮಗೆ ಒತ್ತಾಯ ಮಾಡಿದರು. ನಂತರ ಪಿರ್ಯಾದಿದಾರರು ನಮ್ಮ ಮನೆಗೆ ಖಾಲಿ ದಾಖಲೆಗಳನ್ನು ತಂದು ಅವುಗಳಿಗೆ ನನ್ನ ಸಹಿ ಮಾಡಿಸಿಕೊಂಡು ಮತ್ತು ನನ್ನಿಂದ ಖಾಲಿ ಚೆಕ್ಕುಗಳನ್ನು ಪಡೆದುಕೊಂಡು ಹೋಗಿರುತ್ತಾರೆ. ಪಿರ್ಯಾದಿದಾರರು ಪ್ರತಿ ತಿಂಗಳು ಮನೆಗೆ ಬಂದು ರೂ.20,000-00 ಗಳನ್ನು ಪಡೆದುಕೊಂಡು ಹೋಗುತ್ತಿದ್ದರು. ಒಟ್ಟು ಚೀಟಿ ಹಣವು ಐದು ಲಕ್ಷ ರೂಪಾಯಿಗಳು ಆಗಿದ್ದು ಅದರಲ್ಲಿನಮಗೆ ಮೂರು ಲಕ್ಷ ಕೊಟ್ಟಿದ್ದು ಉಳಿದ ಎರಡು ಲಕ್ಷ ಕೊಟ್ಟಿರುವುದಿಲ್ಲ. ಪಿರ್ಯಾದಿದಾರರು ತಿಂಗಳು ತಿಂಗಳು ಬಿಡ್ ಕರೆಯುತ್ತಿದ್ದರು ಆದರೆ ಅವರು ನಮಗೆ ಆ ಕುರಿತಂತೆ ಏನು ತಿಳಿಸಿರುವುದಿಲ್ಲ. ನಾವು ಹಣ ಪಾವತಿ ಮಾಡಿರುವ ಕುರಿತಂತೆ ರಶೀದಿಯನ್ನು ಕೊಟ್ಟಿರುವುದಿಲ್ಲ ಹಾಗೂ ಅದನ್ನು ಕೊನೆಯಲ್ಲಿ ಕೊಡುವುದಾಗಿ ಹೇಳಿರುತ್ತಾರೆ. ನಾವು ಹಣವನ್ನು ಕೊಡುವಂತೆ ಕೇಳಿದಾಗ

ಪಿರ್ಯಾದಿದಾರರು ನೀವೇ ಹಣವನ್ನು ಕೊಡಬೇಕಾಗುತ್ತದೆ ಎಂದು ಗಲಾಟೆ ಮಾಡಿರುತ್ತಾರೆ ಮತ್ತು ಹಣವನ್ನು ಕೊಡದೇ ಇದ್ದರೇ ನಿಮ್ಮ ಮೇಲೆ ಕೇಸನ್ನು ಹಾಕುತಶ್ತೇವೆ ಎಂದು ಆಗಾಗ ಹೇಳುತ್ತಿದ್ದರು. ಪೋಲೀಸಿನವರು ನಮ್ಮ ಮನೆಗೆ ಬಂದ ನಂತರವೇ ಪಿರ್ಯಾದಿದಾರರು ಪ್ರಕರಣ ದಾಖಲು ಮಾಡಿರುವುದು ನಮಗೆ ತಿಳಿದಿರುತ್ತದೆ. ಆದ್ದರಿಂದ ಈ ಪ್ರಕರಣದಿಂದ ನಮ್ಮನ್ನು ಬಿಡುಗಡೆ ಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

<u>ಪಾಟೀಸವಾಲುಃ ಶ್ರೀ.ಪಿಪಿಜೆ ವಕೀಲರಿಂದ ಪಿರ್ಯಾದಿದಾರರ ಪರವಾಗಿ.</u>

ವಕೀಲರ ವಿನಂತಿಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

15 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ